ಗ್ಯಾಂಗ್‌ಮನ್‌ಗಳು ಇದ್ದಾರೆ. ನೀವು ಸರಕಾರಿ ನೌಕರರಾಗಿರುವುದರಿಂದ ನಿಮಗೆ ಪರಿಹಾರ ಧನ ಕೊಡುವುದಕ್ಕೆ ಆಗುವುದಿಲ್ಲ ಎಂದು ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ. ಇವರ ಗುಡಿಸಲೂ ಸಹ ಸುಟ್ಟು ಹೋಗಿದೆ. ಎಲ್ಲಾ ಸುಟ್ಟು ಭಸ್ಮವಾಗಿದೆ. ದವಸಧಾನ್ಯಗಳು ಪಾತ್ರೆ ಪರಟೆಗಳು ಎಲ್ಲಾ ಸುಟ್ಟು ಹೋಗಿದೆ, ಉಟ್ಟ ಬಟ್ಟೆಯಲ್ಲಿ ಅವರು ಹೊರಗಡೆ ಇದ್ದಾರೆ. ಜೊತೆಜೊತೆಯಲ್ಲೇ ಅವರ ದುಡ್ಡು ಸಹ ಸುಟ್ಟು ಹೋಗಿದೆ. ಅಕ್ಕುಜ್ಜಯಲ್ ಆಗಿ ಒಬ್ಬರಿಗೆ ೧೦ ಸಾವಿರ, ೧೫ ಸಾವಿರ ನಷ್ಟವಾಗಿದೆ. ತಹಸೀಲ್ದಾರ್‌ರವರು ಸ್ಥಳ ವೀಕ್ಷಣೆ ಮಾಡಿದಮೇಲೆ, ದುಡ್ಡು ಸುಟ್ಟು ಹೋದರೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲ ನಿಮ್ಮ ಆದಾಯ ನೋಡಿಕೊಂಡು ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ೮೦೦ ರೂಪಾಯಿಗಳನ್ನೂ ಸಹ ಎಲ್ಲರಿಗೂ ಕೊಟ್ಟಿಲ್ಲ. ಎಂಟುನೂರು ರೂಪಾಯಿಗಳಿಗಿಂತ ಕಡಿಮೆ ಕೊಟ್ಟಿರತಕ್ಕ ಜನರಿಗೆ ಪರಿಹಾರ ನಿಧಿಯಿಂದ ಹೆಚ್ಚು ಪರಿಹಾರ ಧನ ಕೊಡುವುದಕ್ಕೆ ಸಾಧ್ಯ ಇದೆಯೇ ? ಈಗಾಗಲೇ ಡೆಪ್ಯುಟಿ ಕಮಿಷನರ್‌ರವರಿಂದ ವರದಿ ತನಗೆ ಬಂದಿರಬಹುದು. ಅವರೂ ಸ್ಥಳ ವೀಕ್ಷಣೆ ಮಾಡಿರುತ್ತಾರೆ. ರಿಪೋರ್ಟ್ ಕೂಡಾ ಬಂದಿದೆ ಎಂದು ಕಾಣುತ್ತದೆ. ಆ ರಿಪೋರ್ಟ್ ಬಂದಕೂಡಲೇ ಪರಿಹಾರಧನ ಕೊಡುವುದಾಗಿ ತಾವೂ ಕೂಡಾ ಹೇಳಿದ್ದೀರಿ. ಈಗಾಗಲೇ ರಿಪೋರ್ಟ್ ಬಂದಿದೆ, ಆದಕಾರಣ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವಾಗ ಹಣವನ್ನು ಬಿಡುಗಡೆ ಮಾಡುತ್ತೀರಿ, ಎಷ್ಟು ದಿವಸದಲ್ಲಿ ಎಷ್ಟು ಕೊಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದು.

ಶ್ರೀ ವೀರಣ್ಣ.—ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ಗ್ಯಾಂಗ್‌ಮೆನ್‌ಗಳಿಗೆ ಪರಿಹಾರ ಕೊಡುವುದಕ್ಕೆ ಅವಕಾಶ ಇಲ್ಲದಿರಬಹುದು. ಆದರೆ ಈ ಮೂರು ಜನ ಗ್ಯಾಂಗ್‌ಮನ್‌ಗಳು ಏನಿದ್ದಾರೆ ಇವರಿಗೆ ವಿಶೇಷ ಸಂದರ್ಭ ಎಂದು ಪರಿಗಣಿಸಿ, ಅವರಿಗೆ ೫೦೦ ರೂಪಾಯಿ ಸಂಬಳ ಬರಲಿ, ಎಷ್ಟೇ ಬರಲಿ ಲೆಕ್ಕಕ್ಕೆ ತೆಗೆದುಕೊಳ್ಳದೇ, ವಿಶೇಷ ಸಂದರ್ಭ ಎಂದು ಪರಿಗಣಿಸಿ ಎಲ್ಲರಿಗೂ ಕೊಡುವ ರೀತಿಯಲ್ಲಿ ಪರಿಹಾರ ಕೊಡುತ್ತೇವೆ ಅದಕ್ಕೆ ವ್ಯವಸ್ಥೆ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. The S. P. has been authorised to assess the individual loss caused by the fire. ಅವರು ಎಷ್ಟೆಷ್ಟು ಎಂದು ಮಾಹಿತಿ ಕೊಡುತ್ತಾರೆ, ಅದರ ಪ್ರಕಾರ ಮೆರಿಟ್ ನೋಡಿಕೊಂಡು ಹಣ ಕೊಡುವುದಕ್ಕೆ ತಕ್ಷಣ ವ್ಯವಸ್ಥೆ ಮಾಡುತ್ತೇವೆ.

೧೨-೩೦ ಪಿ. ಎಂ.

ಶ್ರೀ ಪದನಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೇ, ಮನೆಗಳನ್ನು ಯಾವಾಗ ಅಲಾಟ್ ಮಾಡುತ್ತಾರೆ, ಯಾವಾಗ ಮನೆಗಳನ್ನು ಕಟ್ಟಿಸಿಕೊಡುತ್ತಾರೆ, ಎಷ್ಟು ದಿವಸದಲ್ಲಿ ಪರಿಹಾರವನ್ನು ಕೊಡುತ್ತಾರೆ ಅದನ್ನು ತಿಳಿಸಬೇಕು.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಮನೆ ಕಟ್ಟಬೇಕಾದರೆ ಬರೇ ದುಡ್ಡು ಇದ್ದರೆ ಕಟ್ಟುವುದಕ್ಕೆ ಆಗುವುದಿಲ್ಲ. ನಿವೇಶನಗಳು ಬೇಕಾಗುತ್ತದೆ. ನಿವೇಶನಗಳನ್ನು ಒದಗಿಸಿಕೊಂಡು ಆದಷ್ಟು ಬೇಗ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

2) ಸಿದ್ದಾಪುರ ತಾಲ್ಲೂಕಿನ ಹಲಗೇರಿ ಹಾಗೂ ಹೊಸೂರು ಗ್ರಾಮಗಳಲ್ಲಿ ಕಾಲರಾ ಕಾಯಿಲೆಯಿಂದ ಜನರು ಸತ್ತಿರುವುದರ ಬಗ್ಗೆ

ಶ್ರೀ ಗೋಪಾಲ ಮುಕಾಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಹಲಗೇರಿ ಹಾಗೂ ಹೊಸೂರು ಗ್ರಾಮಗಳಲ್ಲಿ ಕಾಲರಾ ಕಾಯಿಲೆಯಿಂದ ಇಬ್ಬರು ಸತ್ತಿದ್ದು ಹಾಗೂ ಸುಮಾರು ೧೫-೨೦ ಜನರು ಇನ್ನು ಕಾಲರಾ ಕಾಯಿಲೆಯಿಂದ ನರಳುತ್ತಿರುವ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—(ಆರೋಗ್ಯ ಸಚಿವರು)—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿಗೆ ಹಲಗೇರಿ ಮತ್ತು ಹೊಸೂರು ಗ್ರಾಮಗಳಲ್ಲಿ ದಿನಾಂಕ ೧೫-೪-೮೮ ರಿಂದ ಅತಿಸಾರ ರೋಗದ ೧೬ ಪ್ರಕರಣಗಳು ಕಂಡು ಬಂದಿದ್ದು ಅವುಗಳಲ್ಲಿ ೨ ಪ್ರಕರಣಗಳು ಮರಣಕ್ಕೀಡಾಗಿವೆ

ಇವುಗಳಲ್ಲಿ ೧೪ ಪ್ರಕರಣಗಳು ಮತ್ತು ೨ ಮರಣಗಳು ಹೊಸೂರು ಗ್ರಾಮದಲ್ಲಿ ಆಗಿರುತ್ತವೆ ಉಳಿದ ಎರಡು ಪ್ರಕರಣಗಳು ಹಲಗೇರಿ ಗ್ರಾಮಕ್ಕೆ ಸೇರಿರುತ್ತವೆ.

ಈ ಪ್ರಕರಣಗಳಿಗೆ ಚಿಕಿತ್ಸೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಕ್ಯಾಡಿಗೆಯಂಲ್ಲಿ ಕೊಡಲಾಗಿದೆ. ೧೪ ಪ್ರಕರಣಗಳ ಪೈಕಿ ೯ ಪ್ರಕರಣಗಳು ಗುಣ ಹೊಂದಿದ್ದು ಉಳಿದ ೫ ಪ್ರಕರಣಗಳಿಗೆ ಚಿಕಿತ್ಸೆ ಕೊಡ ಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕಾರವಾರ ಇವರು ದಿನಾಂಕ ೭-೫-೮೮ರ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಊರುಗಳಲ್ಲಿರುವ ೧೧ ಕುಡಿಯುವ ನೀರಿನ ಬಾವಿಗಳಿಗೆ ಬ್ಲೀಚಿಂಗ್ ಪೌಡರ್ ದಿನ ಬಿಟ್ಟು ದಿನ ಹಾಕಲಾಗುತ್ತಿದೆ, ಇಲ್ಲಿಯವರೆಗೆ ೩೯೪ ಜನರಿಗೆ ಕಾಲರಾಚುಚ್ಚು ಮದ್ದನ್ನು ಹಾಕಲಾಗಿದೆ.

ಈ ಕಾಯಿಲೆಯ ಬಗ್ಗೆ ದಿನವಹಿ ಮಾಹಿತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಗಳು, ಕಾರವಾರ ಅವರಿಂದ ಬರುತ್ತಿದ್ದು, ಇದರ ಪ್ರಗತಿ ಬಗ್ಗೆ ನಿಗಾ ಇಡಲಾಗಿದೆ. ದಿನಾಂಕ ೬-೫-೮೮ರಂದು ಕೊನೆಯ ಪ್ರಕರಣವು ಕಾಣಿಸಿಕೊಂಡಿದ್ದು ನಂತರ ಮತ್ತೆ ಯಾವ ಪ್ರಕರಣಗಳೂ ಕಂಡುಬಂದಿಲ್ಲವೆಂದು ವರದಿಯಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ. ಈಗ ನೀರು ಇಲ್ಲ ಎಂದು ಬಾವಿಗೆ ಬ್ಲೀಚಿಂಗ್ ಪೌಡರ್ ಹಾಕುತ್ತಾರೆ. ನೀರಿನ ಬಗ್ಗೆ ಬಾವಿ ವ್ಯವಸ್ಥೆ ಮಾಡುತ್ತಾರೆಯೇ ಎಂದು ಕೇಳು ತ್ತೇನೆ. ಎರಡನೆಯದಾಗಿ ಎರಡು ಮಂದಿ ಕಾಯಿಲೆಯಿಂದ ಮರಣಕ್ಕೆ ಈಡಾಗಿದ್ದಾರೆ. ಅವರಿಗೆ ನಿಮ್ಮ ಸರ್ಕಾರದಿಂದ ಏನಾ ಪರಿಹಾರ ಕೊಡುತ್ತೀರಿ. ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈಗ ಬಾವಿಯನ್ನು ತೋಡಿಸಬೇಕಾಗಿದೆ. ನೀರೆ ಇಲ್ಲವೆಂದು ಹೇಳಿದ್ದಾರೆ. ಅದನ್ನು ಗ್ರಾಮೀಣ ಅಭಿವೃದ್ಧಿ ಸಚಿವರ ಗಮನಕ್ಕೆ ತಂದು ಇದನ್ನು ಮಾಡಿಸಿಕೊಡಿ ಎಂದು ಒತ್ತಾಯ ಮಾಡಿ ಹೇಳುತ್ತೇನೆ, ಆಲ್ಲಿ ಖಾಸಗಿಯವರು ನೀರು ಕೊಡುತ್ತಿದ್ದಾರೆ ಅದೂ ದಾನವಾಗಿ ಅದಕ್ಕೆ ಪರಿಹಾರ ಕೊಡಿ ಎಂದು ಕೇಳುವುದು ಈ ಸಂದರ್ಭದಲ್ಲಿ ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಪರಿಹಾರ ನಾನು ಕೇಳುತ್ತಿರುವುದು ನೀರಿಗಾಗಿ ಅಲ್ಲ. ಎರಡು ಮಂದಿ ಕಾಯಿಲೆಯಿಂದ ಸತ್ತಿದ್ದಾರೆ. ಅವರ ಕುಟುಂಬಕ್ಕೆ ಪರಿಹಾರ ಕೊಡಬೇಕು ಎಂದ ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.— ಕಾಯಿಲೆಯಿಂದ ಸತ್ತವರೆಲ್ಲರಿಗೂ ಪರಿಹಾರವನ್ನು ಕೊಡುವುದಕೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ಶ್ರೀಯುತರಾದ ಪಂಪಾಪತಿ, ಕೆ. ಬಿ. ಶಾಣಪ್ಪ, ಹಾಗೂ ಯು. ಭೂಪತಿ ಇವರು ಗಳು ರಾಜ್ಯದ ರೈತರಿಗೆ ಕೃಷಿಗಾಗುವ ಖರ್ಚು. ಕೃಷಿ ಉತ್ಪನ್ನದಲ್ಲಿನ ಅಂತರ ಬೇನಾಮಿ ಹಿಡುವಳಿ. ಹಾಗೂ ಅರಣ್ಯ ಜಮೀನುಗಳ ಸಾಗುವಳಿದಾರರಿಗೆ ಪಟ್ಟ ಮುಂತಾದ ರೈತರುಗಳ ಬೇಡಿಕೆಗಳಿಗೆ ಬೆಂಗಳೂರಿಗೆ ಜಾಥ ಬಂದಿರುವ ಬಗ್ಗೆ ಮಾನ್ಯ ಕೃದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ನಾಳೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು ಇದಕ್ಕೆ ಉತ್ತರವನ್ನು ನಾಳೆ ಕೊಡಿಸುತ್ತೇನೆ.